**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 513 ಎಸಿಎಂ(2) 2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:08-08-2018.

**-:: ಸು ತ್ತೋಲೆ ::-**

**ವಿಷಯ:** 2018-19ನೇ ಸಾಲಿನಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶ ಸಂಬಂಧ **ಆಫ್-ಲೈನ್** ಕೌನ್ಸಲಿಂಗ್ ಮುಗಿದ ನಂತರ ಖಾಲಿ ಬೀಳುವ ಸೀಟುಗಳನ್ನು ಸಾಮಾನ್ಯ ವರ್ಗದಡಿ ಸೀಟು ಹಂಚಿಕೆ ಮಾಡುವ ಕುರಿತು.

**ಉಲ್ಲೇಖ:**
1. ಈ ಕಛೇರಿ ಪ್ರವೇಶಾಧಿಸೂಚನೆ ಪತ್ರ ಸಂ. ಡಿಟಿಇ/513/ಎಸಿಎಂ(2)/2017-18, ದಿ:05-05-2018.
2. ಈ ಕಛೇರಿ ಸುತ್ತೋಲೆ ಸಂ. ಡಿಟಿಇ/427/ಎಸಿಎಂ(2)/2016-17, ದಿ:18-07-2018 & ದಿ:01-08-2018.

-000000-

2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಉಲ್ಲೇಖ(2) ರ ದಿ:01-08-2018ರ ಸುತ್ತೋಲೆ ಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಗೆ ಪ್ರವೇಶ ಅರ್ಜಿಗಳನ್ನು ನೀಡುವ ಹಾಗೂ ಸ್ವೀಕರಿಸುವ ಸಂಬಂಧ ಅಂತಿಮ ದಿನಾಂಕವನ್ನು 10-08-2018 ಎಂದು ನಿಗಧಿಪಡಿಸಿ, ದಿ:13-08-2018ರಂದು ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ರೋಸ್ಟರ್ ಅನುಗುಣವಾಗಿ ನಿಯಮಗಳನ್ನು ಪಾಲಿಸಿ ಆಯಾ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಹಂತದಲ್ಲಿಯೇ ತುಂಬಲು ಅನುಮತಿ ನೀಡಲಾಗಿತ್ತು.

**ಆದರೆ, ದಿ:13-08-2018ರ ಮದ್ಯಾಹ್ನ 1.00 ಗಂಟೆಗೆ ಆಫ್-ಲೈನ್ ಕೌನ್ಸಲಿಂಗ್ ಸೀಟು ಹಂಚಿಕೆ ಮುಗಿದ ನಂತರ ಖಾಲಿ ಬೀಳುವ ಸೀಟುಗಳನ್ನು ಅದೇ ದಿನ ಮದ್ಯಾಹ್ನ 2.00 ರಿಂದ 4.00 ಗಂಟೆ ಒಳಗಾಗಿ ಸಾಮಾನ್ಯ ವರ್ಗದಡಿ ಆಫ್-ಲೈನ್ ಮುಖಾಂತರ ಸೀಟು ಹಂಚಿಕೆ ಮಾಡುವುದು ಹಾಗೂ ಸಂಜೆ 5.30 ಗಂಟೆಯ ಒಳಗೆ ಪ್ರವೇಶ ಶುಲ್ಕ ಪಾವತಿಸಿ ಅಭ್ಯರ್ಥಿಯು ಪ್ರವೇಶ ಪಡೆಯಲು ಈ ಮೂಲಕ ತಿಳಿಸಲಾಗಿದೆ.** ಪ್ರಯುಕ್ತ, ಇದನ್ನು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ನಿರ್ದೇಶಕರು

ರಾಜ್ಯದ ಸರ್ಕಾರಿ / ಅನುದಾನಿತ - ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ

ಸದರಿ ಸುತ್ತೋಲೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ನಿಯಮಗಳ ಪ್ರಕಾರ ಮೆರಿಟ್‌ಗನುಗುಣವಾಗಿ ತಮ್ಮ ಹಂತದಲ್ಲಿಯೇ <u>ದಿ:13-08-2018ರ</u> ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

<u>ಪ್ರತಿ ಮಾಹಿತಿಗಾಗಿ:-</u>

1) ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2) ಕಾರ್ಯದರ್ಶಿಗಳು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3) ನಿರ್ದೇಶಕರ ಆಪ್ತಶಾಖೆಗೆ,
4) ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು - ಸದರಿ ಪ್ರವೇಶಾಧಿಸೂಚನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
5) ಕಡತಕ್ಕೆ.